# ೧೨ನೇ ದಿನದ ನಿತ್ಯ ಕಲ್ಯಾಣ ಸಮಾರಂಭದ ಸುದ್ದಿ

**ಚಿತ್ರದುರ್ಗ ಆ. 20** - ಇಡೀ ಜಗತ್ತು ಹಣದ ಹಿಂದೆ ಹುಚ್ಚು ಕುದುರೆಯಂತೆ ಓಡುತ್ತಿದೆ. ಮಾನವ ಜೀವನದಲ್ಲಿ ಆಸೆಗಳು ಇರಲಿ ಆದರೆ ದುರಾಸೆಗಳು ಇರಬಾರದು. ಯಾವ ವ್ಯಕ್ತಿ ಆಮಿಷ, ಪ್ರಲೋಭನೆಗಳಿಗೆ ಒಳಗಾಗುತ್ತಾನೋ ಅವನು ವೃತ್ತಿಧರ್ಮದ ನೈತಿಕತೆಯನ್ನು ಕಳೆದುಕೊಳ್ಳುತ್ತಾನೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಸಹ್ಯಾದ್ರಿ ಲೇಔಟ್‌ನ ವಾಸಿ ಶಿವು ಯಾದವ್ ಅವರ ಮನೆಯಲ್ಲಿ ನಡೆದ ನಿತ್ಯ ಕಲ್ಯಾಣ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಮಾನ-ಅಭಿಮಾನ ಕಾಪಾಡುವ ವಿಧಾನ? ವಿಷಯ ಚಿಂತನ ಮಾಡಿದ ಶ್ರೀಗಳು, ಅವರವರ ಮಾನ ಅವರವರು ಕಾಪಾಡಿಕೊಳ್ಳಬೇಕು. ಮಾನವ ಜೀವನದಲ್ಲಿ ಮಾನ ದೊಡ್ಡದು. ಮಾನ ಇದ್ದವರು ಮಾನವರು. ಮಾನ ಎಂದರೆ ಅಳತೆಗೋಲು. ಮಾನಕ್ಕಿಂತಲೂ ದೊಡ್ಡದು ಅಭಿಮಾನ. ಆಧುನಿಕ ಜಗತ್ತಿನಲ್ಲಿ ಜನರು ಸೆಲೆಬ್ರಿಟಿಗಳ ಜೊತೆ ಗುರುತಿಸಿಕೊಳ್ಳುತ್ತಾರೆ, ಅದು ಅಭಿಮಾನ. ಧಾರ್ಮಿಕ ಕ್ಷೇತ್ರಕ್ಕೆ ಬಂದಾಗ ನಾನು ಅವರ ಭಕ್ತ ಎನ್ನುತ್ತಾರೆ. ಮಾನ ಅಭಿಮಾನವನ್ನು ಕಸಿದುಕೊಳ್ಳುವ ಸಂದರ್ಭಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಕಳೆದುಕೊಳ್ಳುವ ಸಂದರ್ಭ ಒಂದು ಕಡೆಯಾದರೆ ಗಳಿಸಿಕೊಳ್ಳುವ ಸಂದರ್ಭಗಳು ಮತ್ತೊಂದು ಕಡೆ. ಮಾನವ ಆಮಿಷ ಪ್ರಲೋಭನೆಗಳಿಗೆ ಒಳಗಾಗುತ್ತಾನೆ. ಯಾವ ವ್ಯಕ್ತಿ ಆಮಿಷಕ್ಕೆ ಒಳಗಾಗುತ್ತಾನೋ ಅವನು ವೃತ್ತಿಧರ್ಮದ ನೈತಿಕತೆಯನ್ನು ಕಳೆದುಕೊಳ್ಳುತ್ತಾನೆ. ಇದು ಎಂತಹ ದುರಂತ. ದುಡಿಮೆಯಿಂದ ಮಾತ್ರ ಹಣ ಗಳಿಸಲು ಸಾಧ್ಯ. ದುಡಿಮೆ ಇದ್ದರೆ ಯಾರೂ ಸಹ ಮತ್ತೊಬ್ಬರ ಹತ್ತಿರ ಹೋಗಬೇಕಾಗಿಲ್ಲ. ದುಡಿಮೆ ಮೇಲೆ ವಿಶ್ವಾಸವಿಡಬೇಕು ಎಂದು ತಿಳಿಸಿದರು.

1) ಶಾರೀರಿಕವಾದ ಆಮಿಷ : ಮಾನವ ಹಸಿವು, ತೃಷೆ ನಿದ್ರೆ ಮೈಥುನಾದಿಗಳು ಅವುಗಳನ್ನು ನಾವು ಸರಿಯಾದ ಮಾರ್ಗದಲ್ಲಿ ಹೊಂದಬೇಕಾಗುತ್ತದೆ. ಅತಿಯಾದ ರುಚಿಗೆ ಒಳಗಾಗುವವರು ಇದ್ದಾರೆ. ರುಚಿ ಜೊತೆಯಲ್ಲಿ ಅಭಿರುಚಿ ಇರಬೇಕು. ಮುರುಘೇಂದ್ರ ಶಿವಯೋಗಿಗಳು ರುಚಿಯ ಮೇಲೆ ನಿಯಂತ್ರಣ ಸಾಧಿಸಿದ್ದರು. ರುಚಿಯ ಜೊತೆಯಲ್ಲಿ ಹೋಗುವವರ ಶರೀರ ಕಾಯಿಲೆಯ ಗೂಡಾಗುತ್ತದೆ. ರುಚಿಯ ಮೇಲೆ ನಿಯಂತ್ರಣ ಸಾಧಿಸಿದವರ ಕಾಯಕ್ಕೆ ಯಾವುದೇ ಕಾಯಿಲೆ ಬರುವುದಿಲ್ಲ, ಹೆಚ್ಚು ವರ್ಷ ಬದುಕುತ್ತಾರೆ.

2) ಆರ್ಥಿಕವಾದ ಪ್ರಲೋಭನೆಗಳು : ಬೀದಿಯ ಬದುಕಿನಲ್ಲಿದ್ದುಕೊಂಡು ಅನೇಕರು ಆದರ್ಶ ವ್ಯಕ್ತಿಗಳಾದರು. ಅದು ಯಕಶ್ಚಿತವಾದುದಲ್ಲ. ಅಲ್ಲಿ ಅನೇಕ ಅನುಭವಗಳಾಗುತ್ತವೆ. ಹಸಿವೆ ನಿಲ್ಲು, ತೃಷೆಯೇ ನಿಲ್ಲು ಎಂದು ಅಕ್ಕಮಹಾದೇವಿ ಹೇಳುತ್ತಾರೆ. ಅಕ್ಕನದು ಸ್ವನಿಯಂತ್ರಣ. ನಾಟಕೀಯ ಜೀವನ ಸಾಗಿಸುವವರು ಹೆಜ್ಜೆ ಹೆಜ್ಜೆಗೆ ಸಿಗುತ್ತಾರೆ. ಅಲ್ಲಮ ಪರ್ಯಟನೆ ಜೀವನ ಆಯ್ದುಕೊಂಡು ಲೋಕಾನುಭವ ಪಡೆಯುತ್ತ ಹೋದ. ಅಲ್ಲಮ ಮತ್ತು ಅಕ್ಕನ ವಚನಗಳು ಪ್ರಕೃತಿಜನ್ಯವಾದವುಗಳು. ಇವರು ಅನುಭವದ ಜೊತೆಯಲ್ಲಿ ಸಾಗಿದರು. ಅನುಭವದಲ್ಲಿ ಮಾಗಿದ ಜೀವನ ಇದೆ. ಅನುಭವದ ಮುಂದೆ ಹಣ, ಆಸ್ತಿ ಯಕಶ್ಚಿತ ಎಂದು ತಿಳಿಸಿದರು.

3) ಬೌದ್ಧಿಕವಾದ ಆಮಿಷಗಳು : ಬೌದ್ಧಿಕ ಆಮಿಷಗಳು ಬಹಳ ಉನ್ನತ ಮಟ್ಟದಲ್ಲಿ ನಡೆಯುವಂಥವು. ಯುಗದ ಮತ್ತೊಂದು ಅನಾರೋಗ್ಯಕರವಾದ ಆಮಿಷ ಎಂದರೆ ಮತಾಂತರ. ಬುದ್ಧ, ಬಸವ ಅವರೂ ಕೂಡ ಬೌದ್ಧಿಕವಾದ ಮತಾಂತರಕ್ಕೆ ಒಳಗಡೆಯಾದರು. ಅಂಬೇಡ್ಕರ್ ಅವರು ಬೌದ್ಧಧರ್ಮಕ್ಕೆ ಒಳಗಾದರು. ಅವರದು ಧರ್ಮಾಂತರ. ಅದು ಆಮಿಷಕ್ಕೆ ಒಳಗಡೆಯಾದಂತಹ ಮತಾಂತರ ಅಲ್ಲ ಅವರು ಇಷ್ಟಪಟ್ಟು ಅಧ್ಯಯನ ಮಾಡಿ ಅವರು ಆ ರೀತಿಯಾಗಿರುವಂತಹ ಧರ್ಮಾಂತರ ಮಾಡಿದರು. ಬಸವಣ್ಣನವರು ಲಿಂಗ ತಾರತಮ್ಯದ ವಿರುದ್ಧವಾಗಿ ಮಹಿಳೆಯರಿಗೂ ಸಮಾನವಾದ ಹಕ್ಕುಗಳು ಬೇಕು ಎನ್ನುವ ವಿಚಾರವನ್ನಿಟ್ಟುಕೊಂಡು ಜಾತಿ, ತಂದೆ ತಾಯಿಗಳನ್ನು ತೊರೆದು ಅಧ್ಯಯನದ ಯಾನವನ್ನು ಆರಂಭಿಸಿ ಹೊಸ ಧರ್ಮ ಸ್ಥಾಪಿಸಿದರು. ಅವರು ಸಂಸಾರದಲ್ಲಿ ಇದ್ದುಕೊಂಡು ಉದಾತ್ತ ಮೌಲ್ಯಗಳನ್ನು ಪ್ರತಿಪಾದಿಸುತ್ತ ಮಾನವತವಾದಿಯಾದರು.

ಗೌತಮ ಬುದ್ಧನು ಕೂಡ ಅಹಿತಕರವಾದ ವಾತಾವರಣವನ್ನು ಸಹಿಸಿಕೊಳ್ಳಲಾರದೆ ಹೊಸ ಧರ್ಮದ ಹುಟ್ಟಿಗೆ ಕಾರಣರಾದರು. ಬುದ್ಧ ಅರಮನೆಯನ್ನು ತೊರೆದು ಬೀದಿಗೆ ಬಂದು ಮಾನವೀಯತೆಯ ಪಾಠ ಹೇಳುತ್ತ ಜಗತ್ಪ್ರಸಿದ್ಧನಾದ. ಪ್ರಜ್ಞಾವಂತರಿಗು ಬೌದ್ಧಿಕವಾದ ಆಮಿಷಗಳಿರುತ್ತವೆ. ಅಂಥವುಗಳಿಗೆ ಒಳಗಾಗಬಾರದು. ಮಾನ ಅಭಿಮಾನ ಕಾಪಾಡಿಕೊಳ್ಳುವ ದಿಸೆಯಲ್ಲಿ ಸ್ವಾಭಿಮಾನ ಸರ್ವಶ್ರೇಷ್ಠವಾಗಿದೆ ಎಂದರು.

ಸಮ್ಮುಖ ವಹಿಸಿದ್ದ ಚಳ್ಳಕೆರೆ ಚೆಲುಮೇರುದ್ರಸ್ವಾಮಿ ಮಠದ ಶ್ರೀ ಬಸವಕಿರಣ ಸ್ವಾಮಿಗಳು ಮಾತನಾಡಿ, 12ನೇ ಶತಮಾನದಲ್ಲಿ ಮೇಲುಕೀಳೆಂಬ ಭಾವನೆ ಇತ್ತು. ಅದನ್ನು ತೊಲಗಿಸಿದವರು ಬಸವಾದಿ ಶರಣರು. ಸ್ವಾಭಿಮಾನದಿಂದ ಪ್ರತಿಯೊಬ್ಬರು ಬದುಕು ಸಾಗಿಸಬೇಕು ಎಂದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಹಿರಿಯ ವಕೀಲ ಪಿ.ಎಂ.ಹನುಮಂತರಾಯ ಮಾತನಾಡಿ, ಹನ್ನೆರಡನೇ ಶತಮಾನದ ಧಾರ್ಮಿಕ ಅನುಭವ ಮಂಟಪ ಮಾಡಿದ ಕೆಲಸವನ್ನು ಮುರುಘಾ ಶರಣರು ಮಾಡುತ್ತಿದ್ದಾರೆ. ಸರ್ವಜನಾಂಗದ ಅಭಿವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ ಎಂದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಕಾರ್ಯಕ್ರಮದ ದಾಸೋಹಿಗಳಾದ ಶಿವು ಯಾದವ್ ಸ್ವಾಗತಿಸಿದರು.




